# ಅಕ್ಕಿ ರೊಟ್ಟಿ

ಬಾನಂಗಳದಲಿ ತೇಲುತ ಬಂತು
ಬಿಳಿಯ ಅಕ್ಕಿ ರೊಟ್ಟಿ.
ಅದನು ನೋಡುತಲಿ ಪುಟ್ಟ ನಕ್ಕನು
ತನ್ನ ಕೈಯ ತಟ್ಟಿ.

ಅಮ್ಮ ನೋಡಲ್ಲಿ! ರೊಟ್ಟಿ ತೇಲುತಿದೆ
ತಿನ್ನಬೇಕು ನಾನು.
ಅದನು ಹಿಡಿಯುವುದು ಹೇಗೆ ಎಂಬುದನು
ತಿಳಿಸ ಬೇಕು ನೀನು.

ಅಮ್ಮ ತೋರಿದಳವನಿಗೆ ನೋಡಲ್ಲಿ ಪುಟ್ಟ
ಚುಕ್ಕಿಗಳ ದೊಡ್ಡ ಹಿಂಡು.
ಬಿಳಿಯ ರೊಟ್ಟಿಯ ಜೊತೆಗೆ ಮಿನುಗುತ್ತ ನಗುತಲಿವೆ
ರೊಟ್ಟಿ ತಿನ್ನುವ ನಿನ್ನ ಆಸೆ ಕಂಡು.

ಆ ಬಿಳಿಯ ರೊಟ್ಟಿಯೋ, ಬಾನಿನೊಳು ಬಲುಚಂದ
ಚಂದಮಾಮನು ಆತ ಎಲ್ಲ ಮಕ್ಕಳಿಗೆ
ಇರುವೊಬ್ಬ ಚಂದ್ರನನು ಹಿಡಿದು ತಿಂದರೆ ನೀನು
ಬರದೆ ಇರುವುದೆ ಅಳುವು ಚುಕ್ಕಿ– ಚಿಣ್ಣರಿಗೆ.

ಮೋಡದಾ ಮರೆಯಲ್ಲಿ ಮುಟ್ಟಾಟ ಆಡುತಲಿ
ಮಕ್ಕಳೆಲ್ಲರ ಚಂದ್ರ ನಗಿಸುತಿರುವ.
ಚುಕ್ಕಿ ಹಿಂಡಿನ ಜೊತೆಗೆ ಆಗಸದಿ ತೇಲುತಲಿ
ರೊಟ್ಟಿ ಎನ್ನುವ ಭ್ರಮೆಯ ಬರಿಸುತಿರುವ.

ಬಿಳಿಯ ಅಕ್ಕಿಯ ರೊಟ್ಟಿ ಆಸೆಯನು ಬಿಟ್ಟುಬಿಡು
ನೋಡಲ್ಲಿ ಆ ಚಂದ್ರ ನಗುತಲಿರುವ.
ಬರುವೆ ನಾ ಆಗಾಗ ನಿನ್ನೊಡನೆ ಆಡಲು
ಕರೆತರುವೆ ಚುಕ್ಕಿಗಳ ಎನ್ನುತಿರುವ.

ನಿನಗಾಗಿ ಮಾಡಿರುವೆ ಅಕ್ಕಿ ರೊಟ್ಟಿಯ ನಾನು
ನೋಡಿಲ್ಲಿ ಹೇಗೆ ಇದೆ! ಚಂದ್ರನಂತೆ.
ರೊಟ್ಟಿ ಚಂದ್ರನ ತಿಂದು ಶುಭ ರಾತ್ರಿಯನು ಹೇಳಿ
ಮಲಗಿಬಿಡು ಪುಟ್ಟ ನೀ ಜಾಣನಂತೆ.

**-ಡಾ.ಗಿರಿಧರರಾವ್ ಹವಲ್ದಾರ್, ಬಳ್ಳಾರಿ**





# ಮಳೆಯ ಸೊಬಗು

ಕಡಲ ನೀರು ಆವಿ ಆತು
ಸುಡುವ ಬಿಸಿಲಿಗೆ
ಓಡಿ ಓಡಿ ಮೋಡ ಬಂತು
ನೋಡು ಬಾನಿಗೆ

ಗಾಳಿ ಬೀಸಿ ಸುತ್ತಿ ಸುಳಿದು
ಧೂಳು ಏಳಲು
ಕಾಡು ಮೇಡು ಮೋಡ ತಡೆದು
ಮುತ್ತನೀಯಲು

ಕಪ್ಪು ಮೋಡ ಸೊಕ್ಕಿನಿಂದ
ಡಿಕ್ಕಿ ಹೊಡೆಯಲು
ಗುಡುಗು ಮಿಂಚು ಸಿಡಿಲ ಸದ್ದು
ಬೆಚ್ಚಿ ಬೀಳಲು

ಮೋಡದಿಂದ ಮಳೆಯು ಬಂತು
ಹಸಿದ ಭೂಮಿಗೆ
ಮಳೆಯು ಬರಲು ಹಚ್ಚ ಹಸಿರು
ಖುಷಿಯು ಕಣ್ಣಿಗೆ

ಮಳೆಯು ಸುರಿವ ಸೊಬಗನೊಮ್ಮೆ
ನೋಡ ಬನ್ನಿರಿ
ಗೆಳೆಯರೆಲ್ಲ ಕೂಡಿ ಮಳೆಯ
ಆಟ ಆಡಿರಿ

**- ಡಾ.ಕರವೀರಪ್ರಭು ಕ್ಯಾಲಕೊಂಡ**